

ಹೋಗೋದು ಬಿಡಲಿಲ್ಲ.

ಹೀಗೇ ಇರುವಾಗ, ಒಂದು ಸಂಜೆ ತಂಪಾದ ಗಾಳಿ ಬೀಸುವ ವಾತಾವರಣದಲ್ಲಿ ನಿರ್ಮಲ ರೈಲ್ವೇ ಸ್ಟೇಷನ್ನಿನಲ್ಲಿ ಕೂತಿರುವಾಗ ಯಥಾಪ್ರಕಾರ ರೈಲು ಬಂತು. ಅದರಿಂದ ಅನೇಕ ಪ್ರಯಾಣಿಕರು ಇಳಿದರು. ಅವರ ಪೈಕಿ ಒಬ್ಬಾಕೆ ಸುಮಾರು 50–55 ವಯಸ್ಸಿನವಳು. ಎಲ್ಲರೂ ತಮ್ಮ ಲಗೇಜನ್ನು ತಗೊಂಡು ಆತುರಾತುರವಾಗಿ ಹೊರಟುಹೋದರೆ ಇವಳು ಮಾತ್ರ ಹಾಗೇ ನಿಂತಿದ್ದಳು. ಸುತ್ತ ಮುತ್ತ ನೋಡಿದಳು. ಕೈಯಲ್ಲಿ ಒಂದು ಬ್ಯಾಗೂ ಇರಲಿಲ್ಲ. ಏನನ್ನೋ ಹುಡುಕುತ್ತಿದ್ದಳು. ಯಾರನ್ನೂ ಮಾತಾಡಿಸದೆ ನೋಡುತ್ತಲೇ ಇದ್ದಳು. ನಿರ್ಮಲಳಿಗೆ ಆಕೆಗೆ ಏನೋ ಸಹಾಯ ಬೇಕಾಗಿದೆ ಅನಿಸಿತು. ಹೋಗಿ ಹತ್ತಿರ ನಿಂತು ಯಾರನ್ನಾದರೂ ಹುಡುಕುತ್ತಿದ್ದೀರಾ ಅಂತ ಕೇಳಿದಳು. ಆಕೆ ನಿರ್ಮಲಳ ತಲೆ ಸವರಿದಳು.

"ನಾನೊಬ್ಬ ಹುಚ್ಚಿ. ಸುಮಾರು ಇಪತ್ತೈದು ವರ್ಷಕ್ಕಿಂತಲೂ ಹಿಂದೆ ನಾನೇ ಬಿಟ್ಟು ಹೋದ ವಸ್ತುವೊಂದನ್ನು ಹುಡುಕ್ಕೊಂಡು ಇವತ್ತು ಬಂದಿದೀನಿ" ಅಂದಳು. "ಏನು ಬಿಟ್ಟು ಹೋಗಿದಿರಾ'' ಎಂದು ನಿರ್ಮಲ ಕೇಳಿದಾಗ "ನನ್ನ ಮಗು" ಅಂದಳು. "ನಿಮ್ಮ ಮಗೂನೇ" ಅಂದರೆ "ಹೌದು ಆಗ ನನಗೆ ಇನ್ನೂ ಮದುವೆಯಾಗಿರಲಿಲ್ಲ. ನನ್ನ ಸ್ನೇಹಿತನ ಸಹವಾಸದಿಂದ ಮಗು ಆಯಿತು. ಆದರೆ ಅವನು ನನ್ನಿಂದ ದೂರವಾದ. ಮುಂದೆ ನನಗೆ ಬೇರೆ ಮದುವೆ ಗೊತ್ತಾಗಿದ್ರಿಂದ ಆ ಮಗೂನ ದೂರ ಮಾಡ್ಕೊಳೋ ಅನಿವಾರ್ಯತೆ ಬಂತು. ಅದಕ್ಕೆ ಆ ಮಗೂನ ಇಲ್ಲಿ ತಂದು ಬಿಟ್ಟು ಹೋದೆ. ಇಲ್ಲಿ ಅದನ್ನು ಯಾರಾದರೂ ಸಾಕಿರ್ತಾರೆ ಒಂದೆರಡು ದಿನ ಬಿಟ್ಟು ಬಂದು ನೋಡಿಕೊಂಡು ಹೋಗೋಣ ಅಂತ ಇಲ್ಲಿಂದ ಹೋದೆ. ಆದ್ರೆ ಮದುವೆಯಾದ ನನ್ನ ಗಂಡ